ಕಲ್ಬುರ್ಗಿ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ನಾಮಕರಣ ಮಾಡುವುದು

756 (789) ಶ್ರೀ ಎಸ್. ರವೀಂದ್ರನಾಥ್ (ಮಾಯಕೊಂಡ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲ್ಬುರ್ಗಿ ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಇಡಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆಯೆ ೀ; ಯಾರು ಮನವಿ ಸಲ್ಲಿಸಿದ್ದಾರೆ;

ಆ) ವಿಶ್ವವಿದ್ಯಾಲಯಕ್ಕೆ ಬಸವಣ್ಣನವರ ಹೆಸರನ್ನು ಇಡುವಲ್ಲಿ ಸರ್ಕಾರದ ನಿಲುವೇನು;

ಇ) ಯಾವಾಗ ಬಸವಣ್ಣನವರ ಹೆಸರನ್ನು ವಿಶ್ವವಿದ್ಯಾಲಯಕ್ಕೆ ನಾಮಕರಣ ಮಾಡಲಾಗುವುದು?

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) 1) ಬಾಗಲಕೋಟೆಯ ರಾಷ್ಟ್ರೀಯ ಬಸವದಳ.

2) ಇಳಕಲ್ ಚಿತ್ತರಗಿ ಶ್ರೀ ವಿಜಯಮಹಂತೇಶ ಸಂಸ್ಥಾನ ಮಠ.

3) ಬೆಳಗಾವಿಯ ರಾಷ್ಟ್ರೀಯ ಬಸವ ದಳ.

4) ಬೆಂಗಳೂರಿನ ರಾಷ್ಟ್ರೀಯ ಬಸವ ದಳ.

5) ಸುಕ್ಷೇತ್ರದ ಮಹಾಮನೆ ಮಠದ ರಾಷ್ಟ್ರೀಯ ಬಸವ ದಳ.

ಆ) ಸದ್ಯಕ್ಕೆ ಯಾವುದೇ ವಿಶ್ವ ವಿದ್ಯಾಲಯದ ಹೆಸರನ್ನು ಬದಲಾಯಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ನ್ಯೂರೋ ಸರ್ಜನ್‌ಗಳು

757 (963) ಶ್ರೀ ಶಂಕರಲಿಂಗೇ ಗೌಡ ಹೆಚ್. ಎಸ್. (ಚಾಮರಾಜ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಕೆ. ಆರ್. ಆಸ್ಪತ್ರೆಯಲ್ಲಿ ಎಷ್ಟು ಮಂದಿ ನ್ಯೂರೋ ಸರ್ಜನ್‌ಗಳಿರುವರು: ಅವರು ರೂಲೂ ಯಾರ್ಯಾರು;

ಆ) ದಿನನಿತ್ಯ ಹೆಚ್ಚುತ್ತಿರುವ ರೋಗಿಗಳ ತಪಾಸಣೆ ಮಾಡಲು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನ್ಯೂರೋ ಸರ್ಜನ್ ಜೊತೆಗೆ ಇನ್ನಷ್ಟು ಮಂದಿ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಡಾ॥ ಎ. ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಮೈಸೂರು ನಗರದ ಕೆ. ಆರ್. ಆಸ್ಪತ್ರೆಯಲ್ಲಿ ಡಾ॥ ಎನ್. ಚಂದ್ರಶೇಖರ್ ರವರು ನ್ಯೂರೋ ಸರ್ಜರಿ ವಿಭಾಗದಲ್ಲಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.